184

ಮೈಸೂರ ಗೆಜಿಟ್.

ಸಂ. 42.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 3.

ಬೆಂಗಳೂರು, ಗುರುವಾರ, ಜನವರಿ ತಾ॥ 17, ಸ್ರ 1907.

III ನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ಮೆಂಟು.

ಲೆಜಿಸ್ಲೆಟಿವ್ ಇಲಾಖೆ.

ತಾರೀಖು 20ನೆ ಡಿಸೆಂಬರ್ 1906.

ನಂ. ಜೆ. 1706—ಲೆಜಿಸ್. 8—06—4, 1903ನೆ ಇಸವಿಯ 1ನೆ ನಂಬರಿನ ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನಿನ 78ನೆ ಪ್ರಕರಣಾನುಸಾರವಾಗಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1905ನೆ ಇಸವಿ ಫೆಬ್ರವರಿ 28ನೆ ತಾರೀಖಿನ ಜೆ. 2483-ರೆಜಿಸ್. 12—4ನೆ ನಂಬರಿನ ಇಸ್ತಿಹಾರ್‌ನಾಮೆಯ 17ನೆ ಕಲಮಿನಲ್ಲಿ ನಮೂದಾದ ರುಸುಮಿನ ದರಕ್ಕೆ ಬದಲಾಗಿ ಈ ಕೆಳಗೆ ನಮೂದು ಮಾಡುವ ದರವನ್ನು 1907ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಮತ್ತು ಅದಕ್ಕೆ ತರುವಾಯ ಜಾರಿಯಲ್ಲಿ ತರಬೇಕೆಂದು ಹುಕುಂ ಕೊಡಲು ಅಪ್ಪಣೆ ದಯಪಾಲಿಸಿರುತ್ತಾರೆ :—

"XVII. ರೆಜಿಸ್ಟರ್ ಮಾಡಲ್ಪಡುವ ಎಲ್ಲಾ ಪತ್ರಗಳ ಮೇಲೂ, 300 ಕ್ಕಿಂತ ಹೆಚ್ಚಿಗೆ ಮಾತುಗಳಿದ್ದರೆ, 300ರ ಮೇಲೆ ಇರುವ ಪ್ರತಿ 100 ಅಥವಾ 100ಕ್ಕೆ ಕಡಮೆಯಾದ ಮಾತುಗಳಿಗೆ 4 ಆಣೆಯ ದರದಂತೆ ರುಸುವನ್ನು ವಸೂಲ್ಮಾಡತಕ್ಕದ್ದು."

ತಾರೀಖು 20ನೆ ಡಿಸೆಂಬರ್ 1906.

ನಂ. ಜೆ. 1709—ರೆಜಿಸ್. 11—06—6, 1903ನೆ ಇಸವಿಯ 1ನೆ ನಂಬರಿ ಮೈಸೂರು ರೆಜಿಸ್ಟ್ರೇಷನ್ ರೆಗ್ಯುಲೇಷನಿನ 78ನೆ ಪ್ರಕರಣಾನುಸಾರವಾಗಿ, ಮೈಸೂರು ಶ್ರೀಮನ್ಮಹಾರಾಜರವರ ಸರ್ಕಾರದವರು, 1878ನೆ ಇಸವಿಯ ಆಗಸ್ಟು 12ನೆ ತಾರೀಖಿನ 131ನೆ ನಂಬರಿನ ಇಸ್ತಿಹಾರ್‌ನಾಮೆಯಲ್ಲಿ ಪ್ರಕಟಿಸಲ್ಪಟ್ಟ ರುಸುಮಿನ ಪಟ್ಟಿಯ 8ನೆ ಕಲಮಿನಲ್ಲಿ ಕಾಣಿಸಿದ ರುಸುಮಿನ ದರಕ್ಕೆ ಬದಲಾಗಿ ಈ ಕೆಳಗಿನ ದರವನ್ನು 1907ನೆ ಇಸವಿಯ ಜನವರಿ ಮೊದಲನೆ ತಾರೀಖಿನಿಂದ ಸೇರಿಸಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ :—

VIII. ಬಂದೇಬಂದು ಖತಾಯಿತಿಯನ್ನು ಅಥವಾ ದಸ್ತ್ಯೇವಜನ್ನು ಹುಡುಕುವುದು ಅಥವಾ ಪರೀಕ್ಷಿಸಿ ನೋಡುವುದು :—

(1) ಯಾವ ವರ್ಷದ ಬುಕ್ಕುಗಳಲ್ಲಿ ಹುಡುಕುವಿಕೆ ನಡೆಯುವದೊ ಆ ಮೊದಲನೆ ವರ್ಷಕ್ಕೆ ಪ್ರತಿ ಖತಾಯಿತಿ ಅಥವಾ ದಸ್ತ್ಯೇವಜಿಗೆ ..... ಬಂದು ರೂಪಾಯಿ.

(2) ಹಾಗೆ ಬುಕ್ಕುಗಳಲ್ಲಿ ಹುಡುಕುವಿಕೆ ನಡೆಯುವ ಪ್ರತಿ ಇತರ ವರ್ಷಕ್ಕೂ ಪ್ರತಿ ಖತಾಯಿತಿಗೆ ಅಥವಾ ದಸ್ತ್ಯೇವಜಿಗೆ ..... ನಾಲ್ಕು ಆಣೆ.

ತಾರೀಖು 28ನೆ ಡಿಸೆಂಬರ್ 1906.

ನಂಬರು 5618—ಮೆಡಿ. 43-04—4.

ಪ್ರ ಕ ಟ ನೆ.

1906ನೆ 1ನೆ ನಂಬರ್ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ ಮೇರೆ ಮಾಡಿದ ಇದರಡಿ ಕಂಡ ಮಸೂದಾ ಯಾ ಚಿತ್ತು ನಿಬಂಧನೆಗಳನ್ನು ಸರ್ವಜನರ ತಿಳುವಳಿಕೆಯ ಬಗ್ಗೆ ಪ್ರಕಟಿಸಿ ಇದೆ :—

2. ಗೆಜೆಟಿನಲ್ಲಿ ಮೇಲ್ಕಂಡ ಮಸೂದಾ ಯಾ ಚಿತ್ತು ನಿಬಂಧನೆಗಳು ಪ್ರಕಟನೆಯಾದ ತೇದಿಯಿಂದ ಎರಡೂವರೆ ತಿಂಗಳುಗಳ ಕೊನೆಯಲ್ಲಿ ಅವು ಆಲೋಚನೆಗೆ ತೆಗೆದುಕೊಳ್ಳಲ್ಪಡುವುವು ; ಮತ್ತು ಆ ಕಾಲದೊಳಗೆ ಬರುವ ಎಲ್ಲಾ ಸೂಚನೆಗಳೂ ಗುಣ ದೋಷ ನಿರೂಪಣೆಗಳೂ ಕ್ರಮವಾಗಿ ವಿಮರ್ಶಿಸಲ್ಪಡುವುವು.

ಅಪ್ಪಣೆಯ ಮೇರೆಗೆ,

ಕೆ. ಎಸ್. ಚಂದ್ರಶೇಖರ ಐಯ್ಯರ್,

ಸರ್ಕಾರಿ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿ.

1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ ಪ್ರಕಾರದ ನಿಬಂಧನೆಗಳು.

1906ನೆ ಮೈಸೂರು ಸಿಡುಬು ಹಾಕುವ ರೆಗ್ಯುಲೇಷನಿನ 2, (1) ನೆ ಪ್ರಕರಣದಿಂದ ಕೊಡಲ್ಪಟ್ಟ ಅಧಿಕಾರಗಳನ್ನು ನಡೆಸುವುದರಲ್ಲಿ, ಎಲ್ಲಿ ಸಿಡುಬು ಹಾಕೋಣವು ಅವಶ್ಯವಾಗಿರತಕ್ಕದ್ದೆಂದು ಪ್ರಕಟಿಸಿದೆಯೋ ಅಂಥಾ ಸ್ಥಳೀಯ ಪ್ರದೇಶಗಳಲ್ಲಿ ಅಂಥಾ ಪ್ರಕಟನೆಯು ಉಪಯೋಗದಲ್ಲಿರುವ ಗಡುವಿನ ವರೆಗೂ ಅಲ್ಲಿನ ಜನಗಳಿಗೆ ಸಿಡುಬು ಹಾಕೋಣವನ್ನು ಕ್ರಮ ಪಡಿಸುವುದಕೆ ಈ ಕೆಳಗಿನ ನಿಬಂಧನೆಗಳನ್ನು ವಿಧಿಸಲು ಶ್ರೀಮಂ ಮಹಾರಾಜರವರ ಸರ್ಕಾರದವರು ಅಪ್ಪಣೆ ದಯಪಾಲಿಸಿರುತ್ತಾರೆ :—

1. ವಿಷಯದಲ್ಲಿ ಅಥವಾ ಪೂರ್ವಾಪರ ಸಂಬಂಧವಲ್ಲಿ ಏನಾದರೂ ವಿರೋಧವಾಗಿದ್ದ ಹೊರತು ಈ ನಿಬಂಧನೆಗಳಲ್ಲಿ,

(1) ತಂದೆ ತಾಯಿ ಎಂದರೆ ಬಂದು ಬೆರಸ ಮಗುವಿನ ತಂದೆ ಅಥವಾ

"ತಂದೆ ತಾಯಿ" ತಾಯಿಯ್ಯೂ ಮತ್ತು ಬಂದು ಅನ್ನೋರಸ್ಯ ಮಗುವಿನ ತ್ರಾಯ್ಥಿ ಎಂದು ಅರ್ಥ.

(2) ರಕ್ಷಕ ಎಂದರೆ, ವ್ಯವಹಾರಶಾಸ್ತ್ರ ರೀತ್ಯಾ ಅಥವಾ ಸಹಜವಾದ ಹಕ್ಕಿನಿಂದ, ಅಥವಾ ಅಂಗೀಕರಿಸಲ್ಪಟ್ಟ ವಾಡಿಕೆಯಿಂದ ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ, ಮತ್ತು ಬದರಿಕೆಯು

"ರಕ್ಷಕ" ಯಾವನಿಗೆ ಬಂದಿದೆಯೋ ಅಥವಾ ಯಾವನು ಯಾವುದಾದರೂ ಮಗುವಿನ ರಕ್ಷಣೆ, ಪೋಷಣೆ ಅಥವಾ ಬದರಿಕೆಯನ್ನು ಅಂಗೀಕರಿಸಿರುತ್ತಾನೆಯೋ ಅಥವಾ ವಹಿಸಿರುತ್ತಾನೆಯೋ ಅಥವಾ ಯಾವುದಾದರೂ ಮಗುವಿನ ರಕ್ಷಣೆ ಅಥವಾ ಬದರಿಕೆಯು ಇದಕ್ಕಾಗಿ ನ್ಯಾಯ್ಯವಾಗಿ ಅಧಿಕಾರ ಹೊಂದಿರುವ ಯಾವನಾದರೂ ಅಧಿಕಾರಿಯಿಂದ ಯಾವನಿಗೆ ಒಪ್ಪಿಸಲ್ಪಟ್ಟಿದೆಯೋ ಅಂಥಾ ಯಾವನಾದರೂ ಮನುಷ್ಯನೆಂದು ಅರ್ಥ.

(3) ಸಿಡುಬು ಹಾಕುವವನು ಎಂದರೆ, ಸಿಡುಬಿನ ವ್ಯಾಧಿಯು ಬಾರದಂತೆ ಜನಗಳಿಗೆ ಸಿಡುಬು ಹಾಕಲು ಸರ್ಕಾರಿ ಸ್ಯಾನಿಟರಿ ಕಮಿಷನರಿಂದ ಅಧಿಕಾರ ಕೊಡಲ್ಪಟ್ಟಿರುವ ಯಾವನಾದರೂ ವೈದ್ಯ ಅಥವಾ

"ಸಿಡುಬು ಹಾಕುವವನು" ಇತರ ಕ್ರಮವಾಗಿ ಯೋಗ್ಯತೆಯನ್ನು ಹೊಂದಿದ ಮನುಷ್ಯನೆಂದು ಅರ್ಥ ಮತ್ತು ಆ ಮಾತಿನಲ್ಲಿ ಸಿಡುಬಿನ ಸೂಪರ್‌ಟೆಂಡೆಂಟುಗಳೂ ಸೇರಿರುತ್ತಾರೆ.

(4) ವೈದ್ಯನು ಎಂದರೆ ಬಂದು (ಯೂನಿವರ್ಸಿಟಿ) ವಿಶ್ವವಿದ್ಯಾಲಯದ ಅಥವಾ ಕಾಲೇಜಿನ (ಡಿಗ್ರಿ) ಪದವಿಯನ್ನು ಅಥವಾ ವೈದ್ಯದಲ್ಲಿ ಸನ್ನದನ್ನು ಅಥವಾ ಬಂದು ಪರಿಗ್ರಹಿಸಲ್ಪಟ್ಟ ವೈದ್ಯಪಾಠಶಾಲೆಯಿಂದ ಯೋಗ್ಯತಾ ಪತ್ರಿಕೆಯನ್ನು ಹೊಂದಿ ಸಿಡುಬು ಹಾಕೋಣವು ಅವಶ್ಯವಾಗಿ ಮಾಡಲ್ಪಟ್ಟಿರುವ ಸ್ಥಳೀಯ ಪ್ರದೇಶದಲ್ಲಿ ಉದ್ಯೋಗಿಸಲ್ಪಟ್ಟಿರುವ ಹಾಸ್ಪಿಟಲ

"ವೈದ್ಯ" ಅಸಿಸ್ಟೆಂಟನ ಅಥವಾ ಮೇಲ್ಪಟ್ಟ ಸ್ಥಾನದ ಮನುಷ್ಯನೆಂದು ಅರ್ಥ.

(5) ಮಗು ಎಂದರೆ ಆರು ತಿಂಗಳಿಗೆ ಮೇಲ್ಪಟ್ಟು ಹನ್ನೆರಡು ವರ್ಷಗಳ ವಯಸ್ಸಿಗೆ ಬಳಪಟ್ಟಿರುವ ಹುಡುಗ ಅಥವಾ ಹುಡುಗಿ ಎಂದು ಅರ್ಥ.

"ಮಗು"

(6) ವಯಸ್ಥನು ಎಂದರೆ ಹನ್ನೆರಡರ ಅಥವಾ ಅದಕ್ಕೆ ಮೇಲ್ಪಟ್ಟು ಮತ್ತು ಅರವತ್ತಕ್ಕೆ ಒಳಪಟ್ಟ ವಯಸ್ಸಿನ ಯಾವನಾದರೂ ಮನುಷ್ಯನೆಂದು ಅರ್ಥ.

"ವಯಸ್ಥ"

(7) ರಕ್ಷಿಸಲ್ಪಡದ ಮನುಷ್ಯನು ಸಿಡುಬಿನ ವ್ಯಾಧಿಯನ್ನು ಉಂಟಾಗಿ ಇದ್ದುದರಿಂದ ಅಥವಾ ಸಾರ್ವಕಾಲಿಕವಾಗಿ ಸಿಡುಬು ಹಾಕಲ್ಪಟ್ಟಿರುವುದರಿಂದ ಸಿಡುಬಿನ ವ್ಯಾಧಿಯು ಬಾರದಂತೆ ರಕ್ಷಿಸಲ್ಪಡದೆ ಇರುವ ಅಥವಾ ಸಿಡುಬು ಹಾಕುವುದಕ್ಕೆ ಆಗ್ರಾಹಕನಾಗಿರುವುದಾಗಿ, ಈ ನಿಬಂಧನೆಗಳಲ್ಲಿ 11ನೆ ನಿಬಂಧನೆಯ ಮೇರೆ ದೃಢೀಕರಿಸಲ್ಪಡದೆ ಇರುವ ಮನುಷ್ಯ, ಮಗು ಅಥವಾ ವಯಸ್ಥನಾಗಿ ಇರುತ್ತಾನೆ.

"ರಕ್ಷಿಸಲ್ಪಡದ ಮನುಷ್ಯನು"

(8) ಸಿಡುಬು ಹಾಕುವ ಕೋಠಿ ಎಂದರೆ ಎಲ್ಲಿ ಸಿಡುಬು ಹಾಕುವವನಿಂದ ಜನಗಳಿಗೆ ಸಿಡುಬು ಹಾಕಲ್ಪಡುತ್ತದೆಯೋ ಅಥವಾ ಎಲ್ಲಿ ಉಚಿತವಾಗಿ ಸಿಡುಬು ಹಾಕಲ್ಪಡುತ್ತದೆಯೋ ಅಂಥಾ ಸ್ಥಳ ಅಥವಾ ಕಟ್ಟಡ ಎಂದು ಅರ್ಥ.

"ಸಿಡುಬು ಹಾಕುವ ಕೋಠಿ"